## ನಾಳೆ ಎನ್‌ಐಟಿಕೆ ಘಟಿಕೋತ್ಸವ

# ಸಿಆರ್‌ಎಫ್, ಸಿಒಇಎಸ್ ಕಟ್ಟಡ ಲೋಕಾರ್ಪಣೆ

ಮಂಗಳೂರು, ಅ. 13: ಎನ್‌ಐಟಿಕೆಯ 20ನೇ ವಾರ್ಷಿಕ ಘಟಿಕೋತ್ಸವ ಅ.15ರಂದು ಬೆಳಗ್ಗೆ 10.30ಕ್ಕೆ ಎನ್‌ಐಟಿಕೆ ಸುರತ್ಕಲ್‌ನ ಹೊಸ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿದ್ದು, ಈ ಸಂದರ್ಭ ಸಿಆರ್‌ಎಫ್ ಮತ್ತು ಸಿಒಇಎಸ್ ಕಟ್ಟಡವನ್ನು ಕೇಂದ್ರ ಶಿಕ್ಷಣ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಉದ್ಘಾಟಿಸಲಿದ್ದಾರೆ.

ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ| ಜಿ.ಸಿ. ಮೋಹನ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 48 ಕೋ.ರೂ. ವೆಚ್ಚದಲ್ಲಿ ನಿರ್ಮಿಸಲಾದ ಕೇಂದ್ರೀಯ ಸಂಶೋಧನ ಸೌಲಭ್ಯ (ಸಿಆರ್‌ಎಫ್) ಮತ್ತು ಸ್ಕೂಲ್ ಆಫ್ ಇಂಟರ್ ಡಿಸಿಪ್ಲಿನರಿ ಸ್ಟಡೀಸ್ (ಸಿಒಇಎಸ್) ಕಟ್ಟಡ ಉದ್ಘಾಟನೆಯಾಗಲಿದೆ ಎಂದರು.

Udayavani, Date: 14/10/22. p, no. - 08